ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು–584 102
(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

**ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರಿನ ಅಡಳಿತ ಮಂಡಳಿಯ ಆಧ್ಯಕ್ಷರಾದ ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರ ಸಲಹೆಗಾರರಾದ ಮಾನ್ಯ ಶ್ರೀ.ಪಿ.ಪಿ.ಪ್ರಭು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04.03.2008, ರಂದು ಬೆಳಗ್ಗೆ 10.30 ಘಂಟೆಗೆ, ಕೊಠಡಿ ಸಂಖ್ಯೆ: 314, 3 ನೇ ಮಹಡಿ, ವಿಧಾನ ಸೌಧ, ಬೆಂಗಳೂರು, ಇಲ್ಲಿ 6 ನೇ ಆಡಳಿತ ಮಂಡಳಿ ಸಮಿತಿ ಸಭೆಯನ್ನು ನೆಡಸಲಾಯಿತು. ಗೌರವಾನ್ವಿತ ಎಲ್ಲಾ ಸದಸ್ಯರುಗಳು ಸಭೆಗೆ ಹಾಜರಾಗುವಂತೆ ಕೋರಲಾಯಿತು.**

<u>ಸಭೆಗೆ ಹಾಜರಿದ್ದವರು:</u>

1. ಮಾನ್ಯ ಶ್ರೀ.ಪಿ.ಪಿ.ಪ್ರಭು — ಅಧ್ಯಕ್ಷರು
   ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರ ಸಲಹೆಗಾರರು,
   (ವೈದ್ಯಕೀಯ ಶಿಕ್ಷಣ ಇಲಾಖೆ), ಕರ್ನಾಟಕ ಸರ್ಕಾರ,
   ಬೆಂಗಳೂರು.

2. ಶ್ರೀ.ಸಿದ್ದಯ್ಯ **I.A.S.** — ಸದಸ್ಯರು
   ಸರ್ಕಾರದ ಕಾರ್ಯದರ್ಶಿಯವರು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈಶಿ)
   ವಿಕಾಸ ಸೌಧ, ಕರ್ನಾಟಕ ಸರ್ಕಾರ, ಬೆಂಗಳೂರು.

3. ಶ್ರೀ.ಹೆಚ್.ಗಣೇಶ್ ಮೂರ್ತಿ, — ಸದಸ್ಯರು
   ಉಪ ಕಾರ್ಯದರ್ಶಿಗಳು,
   ಆರ್ಥಿಕ ಇಲಾಖೆ, ಬೆಂಗಳೂರು.

4. ಡಾ॥ ರಮಾನಂದ ಶೆಟ್ಟಿ, — ಸದಸ್ಯರು
   ನಿರ್ದೇಶಕರು, ವೈದ್ಯಕೀಯ ಶಿಕ್ಷಣ,
   ಆನಂದ ರಾವ್ ವೃತ್ತ, ಬೆಂಗಳೂರು.

5. ಶ್ರೀ.ಪ್ರಕಾಶ್, — ಸದಸ್ಯರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು.

6. ಶ್ರೀ.ಸುಕುಮಾರ್ — ಸದಸ್ಯರು
ಸರ್ಕಾರದ ಕಾರ್ಯದರ್ಶಿಯವರು,
ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.

7. ಶ್ರೀ.ವಿ.ಬಿ.ಕುಲಕರ್ಣಿ — ಸದಸ್ಯರು
ಮುಖ್ಯ ಅಭಯಂತರರು, ಪಿ.ಡಬ್ಲ್ಯೂ.ಡಿ ಸಿ & ಬಿ (ಉತ್ತರ),
ಧಾರವಾಡ.

8. ಶ್ರೀ.ಶಂಕರಪ್ಪ — ಸದಸ್ಯರು
ಮುಖ್ಯ ಆಡಳಿತಾಧಿಕಾರಿಗಳು,
ರಿಮ್ಸ್, ರಾಯಚೂರು.

9. ಡಾ॥ ಟಿ.ಎಂ.ನಟರಾಜ — ಸದಸ್ಯರು
ಜಿಲ್ಲಾ ಶಸ್ತ್ರ ಚಿಕಿತ್ಸಕರು,
ಹಾಗೂ ವೈದ್ಯಕೀಯ ಅಧೀಕ್ಷಕರು ರಿಮ್ಸ್ ರಾಯಚೂರು.

10. ಡಾ॥ ಎಂ.ಆರ್.ಚಂದ್ರಶೇಖರ್, — ಸದಸ್ಯ ಕಾರ್ಯದರ್ಶಿ
ಡೀನ್-ಕಂ-ಡೈರೆಕ್ಟರ್,
ರಿಮ್ಸ್ ರಾಯಚೂರು.

ಕರ್ನಾಟಕ ಸರ್ಕಾರ

ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು-584 102

(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

**ಸಭಾ ನಡುವಳಿಗಳು:**

ಆಡಳಿತ ಮಂಡಳಿಯ ಆಧ್ಯಕ್ಷರಾದ ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರ ಸಲಹೆಗಾರರಾದ ಮಾನ್ಯ ಶ್ರೀ.ಪಿ.ಪಿ.ಪ್ರಭು ಇವರು (ವೈದ್ಯಕೀಯ ಶಿಕ್ಷಣ) ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನು ಹಾರ್ದಿಕವಾಗಿ ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು.

ಸಭೆಯಲ್ಲಿ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

1. ಹಿಂದಿನ ಸಭಾ ನಡುವಳಿಕೆಯನ್ನು ಓದಿ ದಾಖಲಿಸುವುದು.

   ಓದಿ ದಾಖಲಿಸಲಾಯಿತು.

2. ದಿನಾಂಕ: 01.09.07 ರಿಂದ 29.02.08 ವರೆಗಿನ ಜಮಾ ಖರ್ಚಿನ ಅನುಮೋದನೆ ಬಗ್ಗೆ.

   ಹಣಕಾಸು ಮತ್ತು ಖರೀದಿ ಸಮಿತಿಗಳ ಸಭೆಯನ್ನು ಕರೆದು ಅನುಮೋದನೆ ಪಡೆದ ನಂತರ ಆಡಳಿತ ಮಂಡಳಿಯು ಘಟನೋತ್ತರ ಅನುಮೋದನೆ ನೀಡಲಾಗುವುದೆಂದು ಸೂಚಿಸಲಾಯಿತು.

3. 2008-09 ನೇ ಸಾಲಿನ ಆಯವ್ಯಯದ ಪ್ರಸ್ತಾವನೆಗೆ- ಅನುಮೋದನೆ.

   ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ನಂತರ ಆಡಳಿತ ಮಂಡಳಿಯು ಘಟನೋತ್ತರ ಅನುಮೋದನೆ ನೀಡಲಾಗುವುದೆಂದು ಸೂಚಿಸಲಾಯಿತು.

ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು–584 102
(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

4. ಸಂಸ್ಥೆಗೆ ನೇಮಕಗೊಂಡಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂಧಿಗಳ ಪಟ್ಟಿಗೆ ಅನುಮೋದನೆ ಬಗ್ಗೆ.

ಬೋಧಕ ಸಿಬ್ಬಂದಿ ನೇಮಕಾತಿ ಪಟ್ಟಿಗೆ ಸಭೆಯು ಅನುಮೋದನೆ ನೀಡಲಾಯಿತು. ಬೋಧಕೇತರ ಸಿಬ್ಬಂದಿಗಳ ನೇಮಕಾತಿಯ ಬಗ್ಗೆ ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಮಾಡಿಕೊಳ್ಳಲು ಸೂಚಿಸಲಾಯಿತು. ಆದರೆ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳನ್ನು ಯಾತಾಸ್ಥಿತಿಯಲ್ಲಿ ಮುಂದುವರೆಸಲು ಸೂಚಿಸಲಾಯಿತು.

5. ಪದೋನ್ನತಿ ನೀಡಿರುವ ಬೋಧಕ ಸಿಬ್ಬಂಧಿಗಳ ಪಟ್ಟಿಗೆ ಅನುಮೋದನೆ ಬಗ್ಗೆ.

ಡಾ|| ಗಿರೀಶ ಅಚಲ್ಕರ್ ಸಹಾಯಕ ಪ್ರಾಧ್ಯಾಪಕರು, ಪೇಥಲಾಜಿ ವಿಭಾಗ ರಿಮ್ಸ್ ರಾಯಚೂರು ಹಾಗೂ ಡಾ|| ಶಶೀಕಲಾ ಪಾಟೀಲ್ ಸಹಾಯಕ ಪ್ರಾಧ್ಯಾಪಕರು, ಓ.ಬಿ.ಜಿ ವಿಭಾಗ ರಿಮ್ಸ್ ರಾಯಚೂರು ಇವರ ಸೇವೆಯನ್ನು ಭಡ್ತಿಯೊಂದಿಗೆ ಸಹ ಪ್ರಾಧ್ಯಾಪಕರಾಗಿ ಮುಂದುವರೆಸಲು ಅನುಮತಿ ನೀಡಲಾಯಿತು.

6. ಬೋಧಕ ಸಿಬ್ಬಂಧಿಗಳಿಗೆ ಸೇವಾ ಅನುಭವದ ಆಧಾರದ ಮೇಲೆ ವೇತನ ನಿಗಧಿ ಪಡಿಸುವ ಬಗ್ಗೆ.

ಬೋಧಕ ಸಿಬ್ಬಂಧಿಗಳಿಗೆ ಸೇವಾ ಅನುಭವದ ಆಧಾರದ ಮೇಲೆ ವೇತನ ನಿಗಧಿ ಪಡಿಸುವ ಬಗ್ಗೆ ಒಪ್ಪಿಗೆ ನೀಡಲಾಯಿತು.

7. ನಿವೃತ್ತ ಬೋಧಕ (ಪ್ರಾಧ್ಯಾಪಕರ) ಸಂಚಿತ ವೇತನ ನಿಗಧಿ ಬಗ್ಗೆ.

ನಿವೃತ್ತ ಬೋಧಕ (ಪ್ರಾಧ್ಯಾಪಕರ) ಸಂಚಿತ ವೇತನ ನಿಗಧಿ ಬಗ್ಗೆ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

8. ಇತರೆ ವೈದ್ಯಕೀಯ ಸಂಸ್ಥೆಯಿಂದ ನಿಯೋಜನೆಗೊಂಡರೆ, ಈ ಸಂಸ್ಥೆಯಲ್ಲಿ ವೇತನ ಪಡೆಯುತ್ತಿರುವವರಿಗೆ ಶೈಕ್ಷಣಿಕ ಭತ್ಯೆ, ಪಿ.ಜಿ ಎ. ಮತ್ತು ಎನ್.ಪಿ.ಎ ಪಾವತಿಸಲು- ಅನುಮೋದನೆ ಬಗ್ಗೆ.

ಸಧ್ಯದರಲ್ಲೇ ಸರ್ಕಾರದ ಎಲ್ಲಾ ವೈದ್ಯಕೀಯ ಸಂಸ್ಥೆಗಳಲ್ಲಿ ಏಕ ರೂಪದ ವೇತನ ಜಾರಿಗೊಳ್ಳಲ್ಲಿದ್ದು ಈ ಸಮಸ್ಯೆಯು ಪರಿಹಾರವಾಗುವುದೆಂದು ಸೂಚಿಸಲಾಯಿತು.

9. ಸರ್ಕಾರದಿಂದ ಮಂಜೂರಾಗಿರುವ ಹಾಗೂ ಎಂ.ಸಿ.ಐ ನಿಯಮದ ಪ್ರಕಾರ ಬೇಕಾಗಿರುವ ಹುದ್ದೆಗಳ ವ್ಯತ್ಯಾಸದ ಹುದ್ದೆಗಳ ಮಂಜೂರಾತಿ ಬಗ್ಗೆ.

ಸರ್ಕಾರದ ಎಲ್ಲಾ ವೈದ್ಯಕೀಯ ಸಂಸ್ಥೆಗಳಲ್ಲಿ ಏಕ ರೂಪದ ಹುದ್ದೆಗಳನ್ನು ಮಂಜೂರಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಲಾಯಿತು.

10. ಸಂಸ್ಥೆಯ ಕೆಲವು ಪ್ರಮುಖ ಮತ್ತು ಜವಬ್ದಾರಿಯುತ ಹುದ್ದೆಗಳ ನೇಮಕ ಮಾಡಿಕೊಳ್ಳುವ ಬಗ್ಗೆ.

ಇವುಗಳಲ್ಲಿ ಅತೀ ಸೂಕ್ತವಾದ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಿಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಯಿತು. ಇನ್ನುಳಿದ ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಿಸಲು ಸೂಚಿಸಲಾಯಿತು.

ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು-584 102
(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

11. ಕಾಲೇಜು ಕಟ್ಟಡದ ಕಾಮಗಾರಿಯ ಬಗ್ಗೆ.

ಎರಡನೇ ವರ್ಷದ ವೈದ್ಯಕೀಯ ಮಂಡಳಿಯ ಪರೀವಿಕ್ಷಣೆ ಸಮಯದೊಳಗೆ ಅಗತ್ಯವಿರುವ ಕಟ್ಟಡ ಕಾಮಗಾರಿಯು ಮುಗಿಯುವುದೆಂದು ಕಾರ್ಯಪಾಲಕ ಅಭಯಂತರರು ಸಭೆಗೆ ತಿಳಿಸಿದರು.

12. ನೂತನ ಆಸ್ಪತ್ರೆಯ ಕಟ್ಟಡ ಕಾಮಗಾರಿಯ ಮೊತ್ತ ಬಿಡುಗಡೆ ಹಾಗೂ ಈಗಿರುವ ಜಿಲ್ಲಾ ಆಸ್ಪತ್ರೆಯ ಕಟ್ಟಡ ಸಿವಿಲ್ ಕಾಮಗಾರಿಯ ಬಗ್ಗೆ.

ನೂತನ ಆಸ್ಪತ್ರೆಯ ಕಟ್ಟಡ ಕಾಮಗಾರಿಯ ಮೊತ್ತ ಬಿಡುಗಡೆ ಹಾಗೂ ಈಗಿರುವ ಜಿಲ್ಲಾ ಆಸ್ಪತ್ರೆಯ ಕಟ್ಟಡ ಸಿವಿಲ್ ಕಾಮಗಾರಿಯ ಬಗ್ಗೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲಾಗುವುದೆಂದು ತಿಳಿಸಲಾಯಿತು ಈ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಹಣಕಾಸು ಇಲಾಖೆಗೆ ತಿಳಿಸಲಾಯಿತು.

13. ಆಸ್ಪತ್ರೆಯ (ಹೆಚ್ಚುವರಿ) ಉಪಕರಣಗಳ ಖರೀದಿಯ ಬಗ್ಗೆ.

ಆಸ್ಪತ್ರೆಯ (ಹೆಚ್ಚುವರಿ) ಉಪಕರಣಗಳ ಖರೀದಿಯ ಬಗ್ಗೆ ನಿಯಮಾನುಸಾರ ಹಣಕಾಸು ಸಮಿತಿಯ ಮುಂದೆ ಮಂಡಿಸಲು ಸೂಚಿಸಲಾಯಿತು.

14. 2007-08 ಬಾಕಿ ಅನುದಾನ ಬಿಡುಗಡೆ ಬಗ್ಗೆ.

2007-08 ಬಾಕಿ ಅನುದಾನ ಬಿಡುಗಡೆ ಬಗ್ಗೆ ಹಣಕಾಸು ಇಲಾಖೆಯಿಂದ ತ್ವರಿತವಾಗಿ ಕ್ರಮಕ್ಕೈಗೊಳ್ಳಲು ಸೂಚಿಸಲಾಯಿತು.

ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು–584 102
(ಸ್ವಾಯತ್ತ ವೈದ್ಯಕೀಯ ಸಂಸ್ಥೆ) ಫೋನ/ ಫ್ಯಾಕ್ಸ್ ಸಂಖ್ಯೆ: 08532-235488

15. ಸೇವಾ ಶುಲ್ಕ ಸಮಿತಿಯ (ನಿರ್ವಹಣೆಯನ್ನು) ಅಧ್ಯಕ್ಷರಾಗಿ ಜಿಲ್ಲಾಧಿಕಾರಿಗಳ ಬದಲಾಗಿ ನಿರ್ದೇಶಕರು/ ಡೀನ್ ಇವರನ್ನು ನೇಮಕ ಮಾಡುವ ಬಗ್ಗೆ.

ಮೇಲ್ಕಂಡ ವಿಷಯದ ಬಗ್ಗೆ ಶೀಘ್ರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.

16. ಸಂಸ್ಥೆಯ ಮುಂದಿನ ಸಿವಿಲ್ ಕಾಮಗಾರಿಗಳನ್ನು ಸಂಸ್ಥೆಯ ನಿರ್ವಾಹಣ ಅಭಯಂತರರಿಂದ ಸ್ವತಂತ್ರವಾಗಿ ನಿರ್ವಹಿಸುವ ಬಗ್ಗೆ.

ಈಗಿರುವ ಯತಾಸ್ಥಿತಿಯನ್ನು ಕಾಯ್ದು ಕೊಳ್ಳಲು ತಿಳಿಸಲಾಯಿತು.

17. ರಾಜೀವ್ ಗಾಂಧಿ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯ ಎರಡನೇ ಮಹಡಿಯಲ್ಲಿರುವ ಒಳರೋಗಿಗಳ ಕೋಣೆಗಳನ್ನು ಇನ್ನಿತರ ಸೌಲಭ್ಯಗಳನ್ನು ಎಂ.ಸಿ.ಐ ಪರಿವೀಕ್ಷಣೆ ಸಂಬಂಧ ಉಯೋಗಿಸಲು ಅನುಮತಿ.

ಮೇಲ್ಕಂಡ ವಿಷಯದ ಬಗ್ಗೆ ಶೀಘ್ರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.

(ಪಿ.ಪಿ.ಪ್ರಭು)
ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರ ಸಲಹೆಗಾರರು,
(ವೈದ್ಯಕೀಯ ಶಿಕ್ಷಣ ಇಲಾಖೆ), ಕರ್ನಾಟಕ ಸರ್ಕಾರ,
ಹಾಗೂ
ಅಧ್ಯಕ್ಷರು
ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರು.